# ಪ್ರಾರ್ಥನೆ

## ಶ್ಯಾಮಲಾನವರತ್ನ ಮಾಲಿಕಾ

**ಓಂಕಾರಪಂಜರಶುಕೀಮುಪನಿಷದುದ್ಯಾನಕೇಲಿಕಲಕಂಠಿಮ್ ।**
**ಆಗಮವಿಪಿನಮಯೂರೀಮಾರ್ಯಾ–**
**ಮಂತರ್ವಿಭಾವಯೇ ಗೌರೀಮ್ ॥**

ಓಂಕಾರವೆಂಬ ಪಂಜರದಲ್ಲಿ ಗಿಳಿಯಂತಿರುವ, ಉಪನಿಷತ್ತುಗಳೆಂಬ ಉದ್ಯಾನವನದಲ್ಲಿ ಆಟವಾಡುತ್ತಿರುವ ಕೋಗಿಲೆಯಂತಿರುವ, ಆಗಮ ಗಳೆಂಬ ಅರಣ್ಯದಲ್ಲಿನ ನವಿಲಿನಂತಿರುವ, ಶ್ರೇಷ್ಠಳಾದ ಗೌರಿಯನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ.

**ದಯಮಾನದೀರ್ಘನಯನಾಂ**
**ದೇಶಿಕರೂಪೇಣ ದರ್ಶಿತಾಭ್ಯುದಯಾಮ್ ।**
**ವಾಮಕುಚನಿಹಿತವೀಣಾಂ ವರದಾಂ**
**ಸಂಗೀತಮಾತೃಕಾಂ ವಂದೇ ॥**

ಕರುಣೆಯನ್ನು ಸೂಸುತ್ತಿರುವ ವಿಶಾಲನೇತ್ರಗಳನ್ನುಳ್ಳ, ಶ್ರೀಗುರುವಿನ ರೂಪದಿಂದ ಅಭ್ಯುದಯಮಾರ್ಗವನ್ನು ತೋರಿಸುತ್ತಿರುವ, ಎಡ ಬದಿಯಲ್ಲಿ ವೀಣೆಯನ್ನಿಟ್ಟುಕೊಂಡಿರುವ, ವರದಾತೆಯೂ, ಸಂಗೀತ ಮಾತೆಯೂ ಆದ ಶಾರದೆಯನ್ನು ವಂದಿಸುತ್ತೇನೆ.

**ಶ್ಯಾಮಲಿಮಸೌಕುಮಾರ್ಯಾಂ ಸೌಂದರ್ಯಾನಂದ–**
**ಸಂಪದುನ್ಮೇಷಾಮ್ ।**
**ತರುಣಿಮಕರುಣಾಪೂರಾಂ ಮದಜಲಕಲ್ಲೋಲ–**
**ಲೋಚನಾಂ ವಂದೇ ॥**

ಕೃಷ್ಣವರ್ಣದ ಸುಕುಮಾರಿಯೂ ಸೌಂದರ್ಯ ಆನಂದಗಳೆಂಬ ಸಂಪತ್ತಿನಿಂದ ಪ್ರಕಾಶಿಸುತ್ತಿರುವವಳೂ ತಾರುಣ್ಯದ ಕರುಣೆಯಿಂದ ತುಂಬಿರುವವಳೂ ಮದಜಲವೆಂಬ ಅಲೆಯಿಂದ ತೋಯ್ದ ಕಣ್ಣುಳ್ಳ ವಳೂ (ಆದ ದೇವಿಯನ್ನು) ನಮಸ್ಕರಿಸುತ್ತೇನೆ.

**ನಖಮುಖಮುಖರಿತವೀಣಾನಾದರಸಾಸ್ವಾದನವನವೋಲ್ಲಾಸಮ್ ।**
**ಮುಖಮಂಬ ಮೋದಯತು ಮಾಂ**
**ಮುಕ್ತಾತಾಟಂಕಮುಗ್ಧಹಸಿತಂ ತೇ ॥**

ಹೇ ತಾಯಿ, ಉಗುರುಗಳ ತುದಿಯಿಂದ ನುಡಿಸಲ್ಪಟ್ಟ ವೀಣೆಯ ನಾದದ ರಸವನ್ನು ಆಸ್ವಾದಿಸುತ್ತ ಹೊಸ ಹೊಸ ಉಲ್ಲಾಸವನ್ನು ವ್ಯಕ್ತಪಡಿಸುತ್ತಿರುವ, ಮುತ್ತಿನ ಕರ್ಣಕುಂಡಲವನ್ನು ಧರಿಸಿ ಮೋಹ ಗೊಳಿಸುವ ಮಂದಹಾಸವನ್ನುಳ್ಳ ನಿನ್ನ ಮುಖವು ನನ್ನನ್ನು ಆನಂದ ಗೊಳಿಸಲಿ.

**ಮೇಚಕಮಾಸೇಚನಕಂ ಮಿಥ್ಯಾದೃಷ್ಟಾಂತಮಧ್ಯಭಾಗಂ ತೇ ।**
**ಮಾತಃ ಸ್ವರೂಪಮನಿಶಂ ಮಂಗಲಸಂಗೀತಸೌರಭಂ ಮನ್ಯೇ ॥**

ಹೇ ತಾಯಿ, ಯಾವಾಗಲೂ ಮಂಗಳವಾದ ಸಂಗೀತಸೌರಭದಿಂದ ಕೂಡಿದ ನಿನ್ನ ರೂಪವು ಎಷ್ಟು ನೋಡಿದರೂ ತೃಪ್ತಿಯಾಗದಂಥದ್ದು; ವಿಚಿತ್ರ ವರ್ಣಗಳುಳ್ಳದ್ದು. ಅದಕ್ಕೆ ಮಧ್ಯ ಅಥವಾ ಕೊನೆಯಾಗಲಿ ಇದೆಯೆಂದು ಭಾವಿಸುವುದು ಕೇವಲ ಮಿಥ್ಯೆ ಎಂದು ತಿಳಿದಿದ್ದೇನೆ.

# ಸೂಕ್ತಿಪ್ರಭಾ

## ಜಗನ್ಮಾತೆ

**ದೇ**ವರನ್ನು ಅನಂತಶಕ್ತಿ ಸ್ವರೂಪಿಣಿ ತಾಯಿಯಂತೆ ಆರಾಧಿಸಬೇಕು. ಇದರಿಂದ ಉಪಾಸಕರು ಪವಿತ್ರರಾಗುವರು... ಪ್ರೀತಿಪಾತ್ರಳಾದ, ಲಾವಣ್ಯನಿಧಿಯಾದ, ಜಗನ್ಮಯಿಯನ್ನು ನಿನ್ನ ಹೃದಯಾಂತರಾಳದಲ್ಲಿ ಜೋಪಾನವಾಗಿ ರಕ್ಷಿಸು. *ಸ್ವಾಮಿ ವಿವೇಕಾನಂದ*

**ಜ**ಗನ್ಮಾತೆಯು ಬ್ರಹ್ಮಜ್ಞಾನಕ್ಕೆ ಕೀಲಿಕೈಯನ್ನು ಹೊಂದಿದ್ದಾಳೆ. ಅವಳು ಅನುಗ್ರಹವನ್ನು ತೋರಿ, ಅದರ ದ್ವಾರವನ್ನು ತೆರೆಯದ ಹೊರತು, ಯಾರೂ ಬ್ರಹ್ಮಪದವಿಯನ್ನು ಪಡೆಯಲಾರರು.

*ಸ್ವಾಮಿ ಬ್ರಹ್ಮಾನಂದ*

**ಎ**ಲ್ಲವೂ ಜಗನ್ಮಾತೆಯ ಇಚ್ಛೆಯ ಮೇಲೆ ಅವಲಂಬಿತವಾಗಿದೆ. ಆ ಮಹಾಮಾತೆಯು ಕರುಣಾಪೂರ್ಣಳೆಂದು ತಿಳಿದು, ಅವಳನ್ನು ಮೊರೆಯಿಟ್ಟು ಪ್ರಾರ್ಥಿಸು. ಅವಳಿಗೆ ಇಷ್ಟಬಂದ ಸ್ಥಿತಿಯಲ್ಲಿ ನಿನ್ನನ್ನು ಇರಿಸಲಿ. ಆ ಸ್ಥಿತಿಯಲ್ಲಿ ಇದ್ದುಕೊಂಡೇ ನೀನು ಕಲ್ಮಶರಹಿತ ಆನಂದವನ್ನು ಹೊಂದುವೆ ಮತ್ತು ಅವಳ ಪೂರ್ಣದರ್ಶನವನ್ನು ಪಡೆಯುವೆ. *ಸ್ವಾಮಿ ಶಿವಾನಂದ*

**ಜ**ಗನ್ಮಾತೆಯು ನಮ್ಮನ್ನು ತನ್ನ ಸೇವಕರೆಂದು ಕರೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ನಾವು ಅವಳ ಮಕ್ಕಳೇ ಹೊರತು ಸೇವಕರಲ್ಲ. ಯಾವತ್ತೂ ನೀನು ಅವಳ ಮಗುವೆಂದು ಭಾವಿಸು.

*ಸ್ವಾಮಿ ರಾಮಕೃಷ್ಣಾನಂದ*

**ಬ್ರ**ಹ್ಮ ಮತ್ತು ಬ್ರಹ್ಮಶಕ್ತಿ ಎರಡೂ ಅಗ್ನಿ ಮತ್ತು ಅದರ ಸುಡುವ ಶಕ್ತಿಯಂತೆ ಅಭೇದವಾದುದು. ಶಾಸ್ತ್ರಗಳು ಬ್ರಹ್ಮನನ್ನು ವಿರಾಟ್ ಪುರುಷನೆಂದು ಬಣ್ಣಿಸುತ್ತವೆ. ಆತನೊಡನೆ ಬೆರೆತುಕೊಂಡಿರುವ ಶಕ್ತಿಯನ್ನು ಜಗನ್ಮಾತೆ ಎಂದು ಕರೆಯುತ್ತವೆ. ಅದಕ್ಕೆಂದೇ ಗಾಯತ್ರಿ ಮಂತ್ರದ ಅಧಿಷ್ಠಾತೃ ದೇವತೆಯನ್ನು ಕೆಲವೊಮ್ಮೆ ವಿರಾಟ್ ಪುರುಷನೆಂದು ಹೇಳುವುದು, ಮತ್ತೊಮ್ಮೆ ಜಗನ್ಮಾತೆಯೆಂದು ಗುರುತಿಸುವುದು. ಹೀಗೆ ಬೇರೆ ಬೇರೆ ರೀತಿಯಲ್ಲಿ ಕಲ್ಪಿಸಿ ಕೊಳ್ಳುವುದರಲ್ಲಿ ಯಾವ ವಿರೋಧಾಭಾಸವೂ ಇಲ್ಲ.

*ಸ್ವಾಮಿ ಶಾರದಾನಂದ*

**ಜ**ಗನ್ಮಾತೆಯು ಎಲ್ಲದರಲ್ಲೂ ನೆಲೆಸಿರುವಳು, ಎಲ್ಲವನ್ನೂ ವ್ಯಾಪಿಸಿ ರುವಳು ಎಂದು ನಿಶ್ಚಿತವಾಗಿ ತಿಳಿದುಕೋ. ಅದು ಸಂತೋಷವೇ ಇರಲಿ, ದುಃಖವೇ ಇರಲಿ, ಅಥವಾ ಇನ್ನೇನಾದರೂ ಇರಲಿ.

*ಸ್ವಾಮಿ ಸುಬೋಧಾನಂದ*

**ಈ** ಹಿಂದೆ ಭಗವಂತನನ್ನು ತಂದೆಯೆಂದು ಭಾವಿಸಿ ಪೂಜಿಸುವ ಕಡೆಗೆ ನನ್ನ ಒಲವಿತ್ತು. ಆದರೆ ಈಗ, ನಾನು ಜಗನ್ಮಾತೆಯನ್ನು ಬೆಳಗ್ಗೆ, ಮಧ್ಯಾಹ್ನ, ಸಂಜೆ ಆವಾಹಿಸುತ್ತೇನೆ. ತಾಯಿಯ ಮಡಿಲಲ್ಲಿ ಇರುವ ಚಿಕ್ಕ ಮಗುವಿನ ಹಾಗೆ ನನ್ನನ್ನು ಭಾವಿಸಿಕೊಳ್ಳುತ್ತೇನೆ.

*ಸ್ವಾಮಿ ವಿಜ್ಞಾನಾನಂದ*